ದಿನಾಂಕ 16-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿಗಳ ಪರ ಶ್ರೀ ಎನ್.ಟಿ.ಎನ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಹೆಬ್ಬೆಟ್ಟಿನ ಗುರುತುಗಳು ನನ್ನದೇ ಆಗಿರುತ್ತವೆ.

ನೀರಲಗಿ ( ಮಾ ) ಆಡೂರ ಗ್ರಾಮದ ಸರ್ವೆ ನಂ. 183/2 ರ ಜಮೀನಿನ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದು, ಅದೇ ಗ್ರಾಮದ ಸರ್ವೆ ನಂ. 183/2 ರ ಜಮೀನಿನ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-2 ಎಂದು, ಭೂನ್ಯಾಯಮಂಡಳಿ ಹಾನಗಲ್ಲ ದಿಃ 02-02-1976 ರ ಆದೇಶದ ಧೃಡೀಕೃತ ನಕಲನ್ನು ಹಾಜರು ಪಡಿಸಿದ್ದು ನಿಪಿ-3 ಎಂದು, ಡ ನಂ. 2099 ರ ಧೃಡೀಕೃತ ನಕಲನ್ನು ಹಾಜರು ಪಡಿಸಿದ್ದು ನಿಪಿ-4 ಎಂದು, ದಿಃ 21-12-1970 ರ ಮೂಲ ನೊಂದಾಯಿತ ಖರೀದಿ ಪತ್ರವನ್ನು ಹಾಜರು ಪಡಿಸಿದ್ದು ನಿಪಿ-5 ಎಂದು, ಆಸ್ತಿ ನಂ. 101 ರ ಕರನಿರ್ಧಾರಣಾ ಪಟ್ಟಿಯನ್ನು ಹಾಜರು ಪಡಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
SD/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ